# ನನ್ನದು ಚಿತ್ರಕ ಬರವಣಿಗೆ

**ಕನ್ನಡದ ಕಥಾಜಗತ್ತನ್ನು ವಿಸ್ತರಿಸಿದ ಕಥೆಗಾರರ ಕಥೆ ಬರೆಯುವ ಕಸುಬಿನ ಕುರಿತಾದ ಮಾಲಿಕೆ – 'ನನ್ನ ಕಥಾಪ್ರಸಂಗ'. ಕಥಾಯಾನದ ಖುಷಿ, ಸಂಕಟ, ಆ ಪ್ರಕಾರದ ಕುರಿತಾದ ವ್ಯಾಮೋಹ, ಸವಾಲು, ಮಾಂತ್ರಿಕತೆ, ಆದರಿಂದ ಆಗುವ ಬಿಡುಗಡೆ – ಇವೆಲ್ಲ ಅನುಭವಗಳನ್ನು ಒಳಗೊಳ್ಳಲಿರುವ ಈ ಮಾಲಿಕೆಗೆ ಬಹುಕಾಲದಿಂದ ಕಥೆಗಳನ್ನು ಬರೆದುಕೊಂಡು ಬಂದ ಕಥೆಗಾರರು ಬರೆಯಲಿದ್ದಾರೆ. ಕಥೆಯ ತಂತ್ರ ಮತ್ತು ನಿರೂಪಣಾ ವಿಧಾನದ ಕುರಿತ ಕಥೆಗಾರರ ಸ್ವಅನುಭವ 'ಮಯೂರ'ದ ಪುಟಗಳಲ್ಲಿ ದಾಖಲಾಗಲಿದೆ**

ಕೆಲವು ವರ್ಷಗಳ ಹಿಂದೆ ಥಾಯ್ಲೆಂಡ್ ಸುತ್ತಲು ಹೋಗಿದ್ದೆವು. ನಾವು ನಾಲ್ಕು ಜನ. ಒಬ್ಬ ಒಳ್ಳೆಯ ಟೂರ್ ಆಪರೇಟರ್‌ನನ್ನು ಹಿಡಿದು ಎಲ್ಲಾ ಕಡೆ ನಮ್ಮ ಪಾಡಿಗೆ ನಾವು ಸುತ್ತಾಡ ತೊಡಗಿದೆವು. ನಮ್ಮ ಗೈಡ್ ತುಂಬಾ ಸಮರ್ಥಳಾಗಿದ್ದಳು. ಆರು ದಿನಗಳ ಕಾರ್ಯಕ್ರಮ, ನಮ್ಮ ಅಭಿರುಚಿಗೆ ತಕ್ಕಂತೆ ಸ್ಥಳಗಳನ್ನು ಗೊತ್ತು ಮಾಡಿ, ಊಟ ತಿಂಡಿಗಳಿಗೆ ಒಳ್ಳೆಯ ವೆಜಿಟಬಲ್ ರೆಸ್ಟುರಾಗಳನ್ನು ಬುಕ್ ಮಾಡಿ ಬಹಳ ಚೆನ್ನಾಗಿ ಸುತ್ತಿಸಿದಳು. ಅವಳ ಹೆಸರು ಕಿಮ್. ನಮ್ಮ ಟೂರ್ ಮುಗಿದು ಬೀಳ್ಕೊಡುವ ಗಳಿಗೆ ಬಂದಾಗ ನಮ್ಮೆಲ್ಲರಿಗೂ ಬೈ ಹೇಳಿ ಭಾವುಕಳಾದಳು. ಹ್ಯಾಂಡ್ ಬ್ಯಾಗಿನಿಂದ ತನ್ನ ಕಾರ್ಡ್ ತೆಗೆದುಕೊಟ್ಟು ಯಾರಾದರೂ ನಿಮ್ಮ ಸ್ನೇಹಿತರು ಇತ್ತ ಬಂದರೆ ಅವರಿಗೆ ಕೊಡಿ ಎಂದಳು. ಆ ಕಾರ್ಡ್ ಮೇಲೆ ಕಣ್ಣಾಡಿಸಿದಾಗ ಅಲ್ಲಿ ಟಸಾನಿ ಎಂಬ ಹೆಸರಿತ್ತು. ಅದು ಅವಳ ಬಾಸ್ ಇರಬಹುದೇನೋ ಎಂದುಕೊಂಡು "ಈ ಹೆಸರು?" ಎಂದೆ. ಅವಳು ನಾಚಿ ನಗುತ್ತಾ, "ಅದು ನನ್ನ ಹೆಸರೇ. ನನ್ನ ಹೆಸರು ಟಸಾನಿ. ನನ್ನ ಒರಿಜಿನಲ್ ಥಾಯ್ ನೇಮ್. ಆದರೆ ಟೂರಿಸ್ಟ್‌ಗಳಿಗೆ ಕರೆಯಲು ಸುಲಭವಾಗಲೆಂದು ಕಿಮ್ ಎಂದು ಹೇಳಿಕೊಳ್ಳುತ್ತೇನೆ." ಎಂದಳು. ನನಗೆ ಅಚ್ಚರಿಯಾಯಿತು. ಅಲ್ಲಿ ಒಂದು ಕತೆ ಹುಟ್ಟಿತು.

ಇಂಥಾ ಪ್ರತಿಮೆಗಳು ಕತೆ ಮೊಳೆಯಲು ನೆರವಾಗುವ ಒಂದು ಸೆಲೆಯಷ್ಟೇ. ಅಲ್ಲಿಂದಲೇ ಕತೆ ಶುರುವಾಗಬೇಕೆಂದಿಲ್ಲ. ಅಥವಾ ಕೊನೆಗಾಣಬೇಕೆಂದಿಲ್ಲ. ಅದು ಕತೆಯ